


# ಹೆಚ್.ಎಸ್.ಆರ್. ಬಡಾವಣೆ ಬ್ರಾಹ್ಮಣ ಸಂಘ (ರಿ)
## H.S.R. BADAVANE BRAHMANA SANGHA (R)

(SOR/BLU/DR/816/2009-10/31-10-2009)



# 56, 4th Floor, "Gayathri Bhavan", 31st Main, 18th Cross, Sector-II, HSR LAYOUT, BANGALORE-560102

www.hsrvipra.co.in ♦ email: hsr.brahmana@yahoo.com

|| ಶಂಕರಂ ಶಂಕರಾಚಾರ್ಯಂ ಶೇಷಂ ರಾಮಾನುಜಂ ಮುನಿಮ್ | ವಾಯುಂ ಚ ಮಧ್ವಮಾಚಾರ್ಯಂ ಆಚಾರ್ಯತ್ರಯಮಾಶ್ರಯೇ ||

# ವಿಪ್ರಬಂಧು


ತ್ರೈಮಾಸಿಕ ಪತ್ರಿಕೆ – ಸಂಚಿಕೆ 20 – ಪುಟಗಳು 16

ಶ್ರೀ ವಿಶ್ವಾವಸು ಸಂವತ್ಸರ    ವರ್ಷ ಋತು    ಜುಲೈ 2025






ಗುರುಪೂರ್ಣಿಮ, ಗಣಪತಿ ಮತ್ತು ನವರಾತ್ರಿಯ ಶುಭಾಶಯಗಳು

BOOK-POST


With Best Compliments from:
SHASTRY'S BAKERY AND SWEETS
ಶಾಸ್ತ್ರೀಸ್ ಬೇಕರಿ ಮತ್ತು ಸಿಹಿ ತಿಂಡಿಗಳು
# 714/2, 7th Block, K.R. Road, Jayanagar, Bangalore - 560 070
ಸಂತಸದ ಸುದ್ಧಿ ನೂತನವಾಗಿ ಬನಶಂಕರಿ ಶಾಖೆ ತೆರೆಯಲಾಗಿದೆ
70, 46ನೇ ಅಡ್ಡರಸ್ತೆ, ಬನಶಂಕರಿ ಬಸ್ ನಿಲ್ದಾಣದ ಹತ್ತಿರ ಬನಶಂಕರಿ, ಬೆಂಗಳೂರು
ಸಾರ್ವಜನಿಕರಿಗೆ 33 ವರ್ಷಗಳಿಂದ ಶುದ್ಧ ಪದಾರ್ಥಗಳ ಅವಿರತ ಸೇವೆ. ಎಲ್ಲಾ ಶುಭ ಸಮಾರಂಭಗಳಿಗೆ ಶುದ್ಧವಾಗಿ, ರುಚಿಯಾಗಿ ಬೇಕರಿ ಹಾಗೂ ಸಿಹಿ ತಿನಿಸುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಅವಶ್ಯಕತೆಗೆ ಅನುಗುಣವಾಗಿ ತಮ್ಮಲ್ಲಿಗೆ ತಲುಪಿಸಲಾಗುತ್ತದೆ.
ಪ್ರೊ : ಸಂತೇಶಿವರ ಜಯರಾಮು ಮತ್ತು ಸಹೋದರರು
ದೂರವಾಣಿ : 2676 4599
94486 85061, 94803 91152
99869 28281


With Best Compliments From
DOCTOR
SERVING the humanity since 29 years......
RAKSHIT HEALTH
AND COUNSELLING CENTER
" Certified Diabetes Counsellors "
1. #7, (76/1), 7th Cross, 27th Main, 1st Sector, HSR Layout, BANGALORE-560 102
2. #30/1, Munireddy Complex, Mangammanapalya Main Road, Yellukunte, HSR III rd Sector, BANGALORE-560 068.
Dr. B.S. LAKSHMI
BAMS (Ay), BAMS (Integrated)
CNCC (Childcare and Nutrition)
Mobile: 98455 18758
Winner of GLOBAL HEALTH CARE EXCELLENCE AWARD 2013
Dr. AMARNATH T.S.
BSAM (Ay), BAMS (Integrated)
PGDHR (Human Rights)
EMBA (Marketing)
Mobile: 98452 59809

## EXECUTIVE COMMITTEE MEMBERS

| | |
|---|---|
| *PRESIDENT* | |
| Anantha Ramu S. | 9448055193 |
| *VICE-PRESIDENTS* | |
| Subbaramaiah C.N. | 9448189695 |
| Sridhar Rao H. | 9632211611 |
| *SECRETARY* | |
| Ramesh A. | 9008458078 |
| *TREASURER* | |
| Ashwathanarayana Rao K.N. | 9449032129 |
| *JOINT SECRETARIES* | |
| Anantha M.S. | 9986825761 |
| Narasimha Murthy A.R. | 9844568839 |
| Raghunandan C. | 9167661386 |
| Natesh G.S. | 9448777770 |
| *EC MEMBERS* | |
| Narasimhaiah V | 9449028618 |
| Dr. Shyam Sundar G. | 9448676442 |
| Gururaja Rao S. | 9343529635 |
| Ramesh R. | 9880170113 |
| Lakshmana B.G. | 9901311225 |
| Smt. Lakshmi Adiga | 8884122494 |
| Manoja Karantha K. | 8880443064 |
| Narendra Bhat H.G. | 9845173821 |
| Srinivasa S.V. | 7090709946 |
| Subramanya S.N. | 9945034420 |
| Ajeya Krishna K.R. | 9980010021 |
| *ADVISORS* | |
| Shankaran V. | 9886659227 |
| Prabhakar H.C. | 9886035210 |
| Ramaswamy K. | 9909948237 |
| Karanth B.D. | 9945802609 |
| Ramachandra Shastry K. | 9448910012 |
| Chandra Kumar H.V. | 9341628718 |
| Koushalendra S.A.P. | 9481487304 |
| Narayanan R. | 9341261659 |
| V. Ranganatha Murali (Audit) | 9844033971 |
| Dr. Sudheendra Bhat (Legal) | 9845103951 |

### Viprabandhu Editorial Committee

| | |
|---|---|
| Sridhar Rao H. | 9632211611 |
| Dr. Shyam Sundar G. | 9448676442 |
| Natesh G.S. | 9448777770 |
| Narasimhaiah V. | 9449028618 |

hsr.viprabandhu@gmail.com


# ಅಧ್ಯಕ್ಷರ ನುಡಿ

ಹೆಚ್ ಎಸ್ ಆರ್ ಬಡಾವಣೆ ಬ್ರಾಹ್ಮಣ ಸಂಘದ ವಿಪ್ರ ಸದಸ್ಯರೆಲ್ಲರಿಗೂ ಅನಂತ ನಮಸ್ಕಾರಗಳು.

******:**********

16.06.2025 ಸೋಮವಾರದಂದು ನಮ್ಮ ನೆಚ್ಚಿನ ಸಮಾಜಸೇವಕರು, ವಿಪ್ರ ಸಮುದಾಯದ ಹಿತೈಷಿಗಳೂ ಹಾಗೂ ಗಾಯತ್ರೀ ಭವನದಲ್ಲಿ ಸಂಘದ ಕಾರ್ಯ ಚಟುವಟಿಕೆಗಳಿಗೆ ಸ್ಥಳ ದಾನಿಗಳು ಆದ "ಶ್ರೀಯುತ ಶಂಕರ ರೆಡ್ಡಿಯವರು" ಸ್ವರ್ಗಸ್ಥರಾದರು. ವಿಷಯ ತಿಳಿದ ನಮ್ಮೆಲ್ಲರಿಗೂ ಬಹಳ ವಿಷಾದ ವಾಯಿತು. ಇವರ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇನೆ.

******************

ಸಂಘದ ಗಾಯತ್ರೀ ಭವನದಲ್ಲಿ ವಿಪ್ರಸಮುದಾಯದಿಂದ ಪ್ರದೋಷ ಪೂಜೆ ಶ್ರೀರಾಮಚಂದ್ರಶಾಸ್ತ್ರೀ ಯವರ ನೇತೃತ್ವದಲ್ಲಿ ವೇದಬಂಧುಗಳ ಸಹಕಾರದಿಂದ ನಡೆಯುತ್ತಿದೆ. ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಭಾಗವಹಿಸುತ್ತಿರುವ ಎಲ್ಲರಿಗೂ ಎಲ್ಲ ರೀತಿಯ ಸೌಭಾಗ್ಯಗಳು ಒದಗಿ ಬರಲೆಂದು ಪ್ರಾರ್ಥಿಸುತ್ತೇನೆ.

ಈ ಸಂಬಂಧ ಅನುಸರಿಸಬೇಕಾದ ಪೂಜಾ ಕ್ರಮಗಳಿಗಾಗಿ ನಮ್ಮ ವೇದಗುರು ವಿದ್ವಾನ್ ರಾಮಕೃಷ್ಣರವರು ವೇದಬಂಧುಗಳ ಅಪೇಕ್ಷೆ ಮೇರೆಗೆ "ಪ್ರದೋಷ ಪೂಜೆ" ಕೈಪಿಡಿಯನ್ನು ಸೂಕ್ತ ಮಾರ್ಗದರ್ಶನ ದೊಂದಿಗೆ ತಯಾರಿಸಿ ಬಿಡುಗಡೆ ಮಾಡಿಸಿರುವುದು ಸಂಘಕ್ಕೆ ಮತ್ತೊಂದು ವಿಶೇಷ ಗೌರವ ಬಂದಂತಾಗಿದೆ.


ಪ್ರತಿವರ್ಷದಂತೆ ಈ ವರ್ಷವೂ ಶ್ರೀಶಂಕರಜಯಂತಿ ಮತ್ತು ಶ್ರೀ ರಾಮಾನುಜ ತಿರುನಕ್ಷತ್ರಗಳು ವೇದಬಂಧುಗಳ ಭಾಗವಹಿಸುವಿಕೆಯಿಂದ ಜರುಗಿ ಆಚಾರ್ಯದ್ವಯರ ಆಶೀರ್ವಾದ ದೊರಕಿದೆ.

ಬೇಸಿಗೆ ರಜೆಯಲ್ಲಿ ಸಾರ್ವಜನಿಕ ವಿದ್ಯಾರ್ಥಿಗಳಿಗಾಗಿ 10 ದಿನಗಳ ಉಚಿತ ಶಿಬಿರವನ್ನು ಕೈಗೊಳ್ಳಲಾಗಿತ್ತು. ಬಡಾವಣೆಯಲ್ಲಿರುವ ಶಿಕ್ಷಕ ವರ್ಗದವರು ಹಾಗೂ ಆಸಕ್ತರು ತಮ್ಮಲ್ಲಿರುವ ಕುಶಲತೆಯನ್ನು ಮಕ್ಕಳಿಗೆ ಹಂಚಿ ಉತ್ತೇಜನ ನೀಡಿದ್ದು, ಮಕ್ಕಳಿಗೆ ಪ್ರಶಸ್ತಿಪತ್ರ ಹಾಗೂ ಬಹುಮಾನಗಳನ್ನು ನೀಡಿದ್ದು ಸಂಘಕ್ಕೆ ಮತ್ತಷ್ಟು ಗೌರವಪಡೆಯುವುದರಲ್ಲಿ ಯಶಸ್ವಿಯಾಯಿತು.ಈ ಕಾರ್ಯಕ್ರಮ ರೂಪಿಸುವುದರಲ್ಲಿ ಕಾರ್ಯದರ್ಶಿ ಶ್ರೀ ಎ. ರಮೇಶ್ ರವರಿಗೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುವುದು ನಮ್ಮೆಲ್ಲರ ಕರ್ತವ್ಯವೆಂದು ಭಾವಿಸುತ್ತೇನೆ.

ಕಳೆದ ಶೈಕ್ಷಣಿಕ ವರ್ಷದ SSLC ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಿದ ಅಗರ ಪ್ರೌಢಶಾಲೆಯ ಐದು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಉತ್ತೇಜಿಸಲಾಗಿದೆ.

ಮೇಲ್ಕಂಡ ಎಲ್ಲಾ ಕಾರ್ಯಗಳಿಗೂ ಬೆನ್ನೆಲುಬಾಗಿ ನಿಂತು ಸಹಕಾರ ನೀಡಿರುವ ಸಂಘದ ಕಾರ್ಯಕಾರಿಣಿ ಸದಸ್ಯರಿಗೂ ಹಾಗೂ ಸಾಮಾನ್ಯ ಸದಸ್ಯರಿಗೂ ಅನಂತಾನಂತ ಧನ್ಯವಾದಗಳು.

ಸರ್ವೇ ಜನಾಃ ಸುಖಿನೋ ಭವಂತು.



ಅನಂತರಾಮು ಎಸ್.

ಅಧ್ಯಕ್ಷರು, ಹೆಚ್.ಎಸ್.ಆರ್. ಬಡಾವಣೆ ಬ್ರಾಹ್ಮಣ ಸಂಘ

# ಕಾರ್ಯದರ್ಶಿ ವರದಿ

ಸನ್ಮಾನ್ಯ ಸದಸ್ಯರೇ,

25/03/2025 ರಿಂದ 25/06/25ರ ಅವಧಿಯಲ್ಲಿ ಜರುಗಿದ ಸಂಘದ ಕಾರ್ಯಕ್ರಮಗಳ ವರದಿ:

1. ಪ್ರತೀ ಪ್ರದೋಷ ದಿನದಂದು ಶ್ರೀ.ರಾಮಚಂದ್ರಶಾಸ್ತ್ರಿ ಅವರ ನೇತೃತ್ವದಲ್ಲಿ, ಇಚ್ಛಿತ ಕರ್ತೃಗಳಿಂದ ಪ್ರದೋಷ ಪೂಜೆಯನ್ನು ಜರುಗಿಸಲಾಯಿತು.
2. 20/04/2025 - ಉತ್ತರಾದಿ ಮಠದ ಪರಮ ಪೂಜ್ಯ ಶ್ರೀ ಶ್ರೀ ಸತ್ಯಾತ್ಮ ತೀರ್ಥ ಸ್ವಾಮಿಗಳು, ಶ್ರೀ ಸುಬ್ರಮಣ್ಯ ಮಠ, ಸೆಕ್ಟರ್ 3 HSR ಲೇಔಟ್‌ಗೆ ಭೇಟಿ ನೀಡಿದಾಗ, ಎಸ್.ಎಲ್.ಎನ್ ವೇದ ಪಾಠಶಾಲೆಯ ವೇದಬಂಧುಗಳಿಂದ ವೇದಪಾರಾಯಣವನ್ನು ನಡೆಸಲಾಯಿತು.
3. ದಿನಾಂಕ 24/04/2025ರ ಗುರುವಾರದಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಂಘ ಕ್ಕೆ ಹೊಸದಾಗಿ ಚುನಾಯಿತರಾಗಿ, ಅಧ್ಯಕ್ಷರಾದ ಶ್ರೀ. ರಘುನಾಥ್ ರವರನ್ನು ನಮ್ಮ ಸಂಘದಿಂದ ಸನ್ಮಾನಿಸಲಾಯಿತು.
4. ದಿನಾಂಕ 02.05.2025 ರ ಶುಕ್ರವಾರ ಸಂಘದ ಗಾಯತ್ರಿ ಭವನದಲ್ಲಿ ವಿದ್ವಾನ್ ಶ್ರೀ.ಕೆ.ಎಸ್. ರಾಮಕೃಷ್ಣರವರ ನೇತೃತ್ವ ದಲ್ಲಿ ಶ್ರೀ ಶಂಕರ ಜಯಂತಿ ಹಾಗೂ ಶ್ರೀ ರಾಮಾನುಜ ತಿರುನಕ್ಷತ್ರ ಆಚರಣೆಯನ್ನು ಜರುಗಿಸಲಾಯಿತು. ಶಂಕರ ಜಯಂತಿ ಪೂಜೆಗೆ ಶ್ರೀ. ಪ್ರಭಾಕರ.ಹೆಚ್.ಸಿ ದಂಪತಿಗಳು ಹಾಗೂ ಶ್ರೀ ರಾಮಾನುಜ ತಿರು ನಕ್ಷತ್ರ ಪೂಜೆಗೆ ನರಸಿಂಹಯ್ಯ ದಂಪತಿಗಳು ಭಾಗಿಯಾಗಿದ್ದರು.
5. ದಿನಾಂಕ 05/05/2025ರ ಸೋಮವಾರದಿಂದ 10ದಿನಗಳವರೆಗೆ ಸಂಘದಿಂದ ಸಾರ್ವಜನಿಕವಾಗಿ 7ವರ್ಷದಿಂದ 12ವರ್ಷದ ವರೆಗಿನ ಮಕ್ಕಳಿಗೆ ಉಚಿತ ಬೇಸಿಗೆ ಶಿಬಿರವನ್ನು ಹೆಚ್.ಎಸ್.ಆರ್ ಬಡಾವಣೆ 1ನೇ ಸೆಕ್ಟರ್ ನಲ್ಲಿರುವ ಶ್ರೀ ವಿನಾಯಕ ಪ್ರತಿಷ್ಠಾನದಲ್ಲಿ ಆಯೋಜಿಸಲಾಯಿತು.
6. "ಪ್ರದೋಷ ಪೂಜೆ"ಯ ಕೈಪಿಡಿಯನ್ನು ವೇದಬಂಧುಗಳ ಅಪೇಕ್ಷೆ ಮತ್ತು ಸಹಕಾರದೊಂದಿಗೆ ವೇದ ಗುರುಗಳಾದ ವಿದ್ವಾನ್ ಶ್ರೀ. ಕೆ.ಎಸ್.ರಾಮಕೃಷ್ಣರವರು ಬರೆದಿದ್ದು, ನಮ್ಮ ಸಂಘದಿಂದ ಮುದ್ರಣಗೊಂಡಿರುತ್ತದೆ. ಈ ಕೈಪಿಡಿಯನ್ನು ದಿನಾಂಕ 24/05/2025ರಂದು ಬಿಡುಗಡೆ ಮಾಡಲಾಯಿತು
7. 2024-2025ನೇ ಶೈಕ್ಷಣಿಕ ವರ್ಷದಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಗಳಿಸಿ ಪಾಸಾದ ಅಗರದ ಸರ್ಕಾರೀ ಹೈಸ್ಕೂಲ್ ನ ವಿದ್ಯಾರ್ಥಿಗಳಿಗೆ ಸಂಘದಿಂದ ಪ್ರತಿಭಾ ಪುರಸ್ಕಾರವನ್ನು ದಿನಾಂಕ 14/05/2025 ರಂದು ನೀಡಲಾಯಿತು.
8. ದಿನಾಂಕ 15/06/2025ರ ಭಾನುವಾರದಂದು ಎಸ್.ಎಲ್.ಎನ್ ವೇದಪಾಠ ಶಾಲೆಯಿಂದ ಓಂ ಶಾಂತಿ ಧಾಮಕ್ಕೆ ವೇದ ಗುರುಗಳ ನೇತೃತ್ವದಲ್ಲಿ ಭೇಟಿ ನೀಡಲಾಯಿತು.
9. 25/03/2025 ರಿಂದ 25/06/2025ವರೆಗೆ ಸಂಘಕ್ಕೆ ಆಗಮಿಸಿದ ನೂತನ ಸದಸ್ಯರ ವಿವರ:-

| | |
|---|---|
| 1.ಶ್ರೀ. ಗುರುಪ್ರಸಾದ್.ಕೆ | ಸ. ಸಂಖ್ಯೆ 798 dt: 21/05/2025. |
| 2.ಶ್ರೀ.ವಿಶ್ವನಾಥ. ಟಿ.ಪಿ | ಸ. ಸಂಖ್ಯೆ 799 dt: 21/05/2025. |
| 3.ಶ್ರೀಮತಿ. ಜೆ.ಜಯಂತಿ | ಸ. ಸಂಖ್ಯೆ-800 dt: 21.05.2025. |
| 4.ಶ್ರೀ.ಎಸ್.ರಾಮದುರೈ | ಸ. ಸಂಖ್ಯೆ-802 dt: 21.05.2025. |
| 5.ಶ್ರೀ. ವಿಶ್ವನಾಥ. ಎಸ್ | ಸ. ಸಂಖ್ಯೆ 803 dt: 11/06/2025. |
| 6.ಶ್ರೀಮತಿ. ಮೈತ್ರಿ. ಆರ್ | ಸ.ಸಂಖ್ಯೆ 804 dt: 11/06/2025. |
| 7.ಶ್ರೀಮತಿ. ರಮ್ಯಾ.ಎಂ.ಆರ್ | ಸ. ಸಂಖ್ಯೆ 805 dt: 11/06/2025. |
| 8.ಶ್ರೀ. ಟಿ. ಷಣ್ಮುಘನಾಥನ್ | ಸ. ಸಂಖ್ಯೆ 806 dt: 11/06/2025 ಪೋಷಕರು |

ಈ ಅವಧಿಯಲ್ಲಿ ಕೆಳಕಂಡ ಸದಸ್ಯರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

1. 04/04/2025 - ವಿ.ಬಾಲಕೃಷ್ಣ , (82)
2. 13/04/2025 - ಕೆ.ಎನ್.ಪ್ರಸನ್ನ, (80)

ವಂದನೆಗಳೊಂದಿಗೆ

ರಮೇಶ್.ಎ, ಕಾರ್ಯದರ್ಶಿ

# ಉಚಿತ ಬೇಸಿಗೆ ಶಿಬಿರ

ನಮ್ಮ ಸಂಘದ ವತಿಯಿಂದ ಮಕ್ಕಳಿಗೆ ಉಚಿತ ಬೇಸಿಗೆ ಶಿಬಿರವನ್ನು ದಿನಾಂಕ 05/05/2025 ರಿಂದ 14/05/2025 ರವರೆಗೆ ಹಮ್ಮಿ ಕೊಳ್ಳಲಾಗಿತ್ತು. ಇದರ ಮುಖ್ಯ ಉದ್ದೇಶ ಮಕ್ಕಳಿಗೆ ನಮ್ಮ ಸನಾತನ ಧರ್ಮ, ಸಂಸ್ಕೃತಿ, ಮಾನಸಿಕ, ಬೌದ್ಧಿಕ ಬೆಳವಣಿಗೆ, ಯೋಗ, ಆರೋಗ್ಯ ಇತ್ಯಾದಿ ಸದ್ವಿಚಾರಗಳ ಅರಿವು ಮೂಡಿಸುವುದೇ ಆಗಿತ್ತು. 10 ದಿನಗಳಲ್ಲಿ ಸರಾಸರಿ 75 ಮಕ್ಕಳು ಈ ಶಿಬಿರದ ಉಪಯೋಗವನ್ನು ಪಡೆದರು.

ಶಿಬಿರಾರ್ಥಿಗಳಿಗೆ ಸಂಘದ ಸದಸ್ಯರು ಹಾಗು ಇತರ ಬೋಧಕರಿಂದ ಅತ್ಯಂತ ಉಪಯುಕ್ತ ಚಟುವಟಿಕೆಗಳನ್ನು, ದೇವರ ಸ್ತೋತ್ರಗಳನ್ನು, ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಯ ಚಟುವಟಿಕೆಗಳನ್ನು ಹೇಳಿಕೊಡಲಾಯಿತು.

- ಶ್ರೀಮತಿ ಕಲ್ಯಾಣಿ ರಮೇಶ್ ರವರು ಮಕ್ಕಳಿಗೆ ದಿನಂಪ್ರತಿ ಪಠಿಸುವ ನಿತ್ಯ ಶ್ಲೋಕಗಳನ್ನು ಹಾಗೂ ಭಗವದ್ಗೀತೆಯ ಧ್ಯಾನ ಶ್ಲೋಕಗಳನ್ನು ಕಲಿಸಿದರು.
- ಶ್ರೀಮತಿ ನಾಗಶ್ರೀ ಯವರು ಸ್ವಾತಂತ್ರ ಹೋರಾಟಗಾರರ ಪರಿಶ್ರಮ ಹಾಗೂ ಜಲಿಯನ್ ವಾಲಾಭಾಗ್ ನ ದುರಂತದ ಕಥೆಗಳ ಮೂಲಕ ದೇಶದ ಚರಿತ್ರೆಯ ಮಹತ್ವವನ್ನು ತಿಳಿಸಿದರು.
- ಡಾಕ್ಟರ್ ನಾಗರತ್ನ ರವರು ನಮ್ಮ ಸನಾತನ ಧರ್ಮದ ಸಪ್ತ ಋಷಿಗಳು ಹಾಗೂ ಅವರ ಆವಿಷ್ಕಾರಗಳ ಬಗ್ಗೆ ತಿಳುವಳಿಕೆ ನೀಡುತ್ತಾ, ಸನಾತನ ಧರ್ಮದ ಸತ್ವವನ್ನು ಮಕ್ಕಳಿಗೆ ಮನದಟ್ಟಾಗುವಂತೆ ಬೋಧಿಸಿದರು.
- ಶ್ರೀಮತಿ ಬ್ರಾಹ್ಮಿ ನಟೇಶ್ ರವರು ಮಕ್ಕಳಿಗೆ ದೇಶಭಕ್ತಿ ಗೀತೆ ಗಳನ್ನು ಕಲಿಸಿ ಹಾಡಿಸುವುದರ ಮುಖಾಂತರ ಮಕ್ಕಳಲ್ಲಿ ದೇಶಭಕ್ತಿಯನ್ನು ಪ್ರಚೋದಿಸಿದರು.
- ಶ್ರೀಮತಿ ಪ್ರೇಮ ರೆಡ್ಡಿ ಯವರು ಮಕ್ಕಳಿಗೆ ಹಿಂದೂ ಪಂಚಾಂಗ ಹಾಗೂ ಯೋಗ ವಿಜ್ಞಾನದ ಪರಿಚಯ ಮಾಡಿಸಿದರು.
- ಶ್ರೀಮತಿ ದಿವ್ಯ ವಿನಯ್ ಅವರು ಮಕ್ಕಳಿಗೆ ದೇವರ ನಾಮ ಮತ್ತು ಭಾವಗೀತೆಗಳನ್ನು ಸುಶ್ರಾವ್ಯವಾಗಿ ಹಾಡುವುದನ್ನು ಕಲಿಸಿದರು.
- ಶ್ರೀಮತಿ ಸುಜಾತ ಹಾಗೂ ಪ್ರೇಮ ರವರು ಮಕ್ಕಳಿಗೆ ಗಣೇಶ ನಮಸ್ಕಾರ ಮತ್ತು ಹನುಮಾನ್ ನಮಸ್ಕಾರವನ್ನು ಮಾಡಿಸುವುದರ ಮೂಲಕ ಮಕ್ಕಳಿಗೆ ಯೋಗಾಭ್ಯಾಸದ ಅರಿವು ಮೂಡಿಸಿದರು.
- ಶ್ರೀಯುತ ಶ್ರೀಧರ್ ರಾವ್ ಅವರು 'ಸೊಡುಕು' ಜಾಣ್ಮೆಯ ಆಟವನ್ನು ಕಲಿಸುವುದರ ಮೂಲಕ ಮಕ್ಕಳಿಗೆ ಬುದ್ಧಿಶಕ್ತಿಯನ್ನು ಚುರುಕುಗೊಳಿಸಿಕೊಳ್ಳುವಂತೆ ಸಲಹೆ ನೀಡಿದರು.
- ಡಾಕ್ಟರ್ ಲಕ್ಷ್ಮೀ ಅಮರನಾಥ್ ರವರು ಆರೋಗ್ಯ ಮತ್ತು ಶುಚಿತ್ವದ ಬಗ್ಗೆ ಮಕ್ಕಳಿಗೆ ಸಮಯೋಚಿತ ಅರಿವು ಮೂಡಿಸಿದರು.
- ಶ್ರೀಮತಿ ಮೀರಾ ನಾರಾಯಣನ್ ರವರು ಯೋಗಾಭ್ಯಾಸದ ಒಂದು ಭಾಗವಾಗಿ ವಿವಿಧ ಪ್ರಾಣಿಗಳ ನಡಿಗೆಯನ್ನು ಕಥೆಯ ಮೂಲಕ ಅಭಿನಯಿಸಿ ಮಕ್ಕಳ ಮನರಂಜಿಸಿ ಯೋಗವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಉಪದೇಶಿಸಿ, ಸೂರ್ಯ ನಮಸ್ಕಾರವನ್ನು ಕಲಿಸಿದರು.
- ಶ್ರೀಮತಿ ವಾಣಿಶ್ರೀ ಯವರು, ಜೀವನಕ್ಕೆ ಅಗತ್ಯವಿರುವ ಕೆಲವು ಜೀವನ ಕೌಶಲ್ಯಗಳನ್ನು ಮಕ್ಕಳಿಗೆ ತಿಳಿಸಿದರು
- ಶ್ರೀಯುತ ಎ. ರಮೇಶ್ ರವರು ಒಗಟುಗಳು, ಪ್ರಾಸಗಳು, ರಸಪ್ರಶ್ನೆಗಳನ್ನು ಮಕ್ಕಳಿಗೆ ತಿಳಿಸುವುದರ ಮೂಲಕ ಮಕ್ಕಳ ಬುದ್ಧಿಶಕ್ತಿಯನ್ನು ಹೆಚ್ಚಿಸಿದರು. ಇದಲ್ಲದೆ ದಿನಂಪ್ರತಿ ವಿವಿಧ ಆಟಗಳನ್ನು ಆಡಿಸಿ ಶಿಬಿರವನ್ನು ಆಕರ್ಷಕವಾಗಿಸುವಲ್ಲಿ ಮಹತ್ತರ ಯೋಗದಾನವನ್ನು ನೀಡಿದರು.



- ಶ್ರೀಮತಿ ರಶ್ಮಿ ಚೇತನ್ ಅವರು ಮಕ್ಕಳಿಗೆ ರಾಮಾಯಣದ ಕೆಲವು ತುಣುಕುಗಳನ್ನು ಕಥೆಯ ಮೂಲಕ ಹೇಳಿ ಮಕ್ಕಳಿಗೆ ಪ್ರಶ್ನೆಯನ್ನು ಕೇಳುವುದರ ಮೂಲಕ ಮಕ್ಕಳ ಜ್ಞಾಪಕ ಶಕ್ತಿಗೆ ಸವಾಲನ್ನು ನೀಡಿದರು.
- ಶ್ರೀಮತಿ ಉಷಾ ಅಯ್ಯರ್ ಅವರು ಕರಕುಶಲ ಕಲೆಗೆ ಬೇಕಾದ ಸಾಮಗ್ರಿಗಳನ್ನು ತಾವೇ ನೀಡಿ, ಮಕ್ಕಳಿಗೆ ಕಲೆಯನ್ನು ಕಲಿಸಿ, ಅವರಿಂದಲೇ ಆಕರ್ಷಕ ವಸ್ತುಗಳನ್ನು ಮಾಡಿಸಿದರು.
- ಡಾಕ್ಟರ್ ಅಮರನಾಥ್ ರವರು ದಿನನಿತ್ಯ ಬಳಸುವ ಪ್ಲಾಸ್ಟಿಕ್ ವಿಧಗಳು ಹಾಗೂ ಅದರಿಂದಾಗುವ ಹಾನಿಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿದರು.
- ಶ್ರೀಮತಿ ಮೈತ್ರಿ ಯವರು ಒಂದು ಕಥೆಯನ್ನು ಪ್ರಾರಂಭಿಸಿ ಅದನ್ನು ಮಕ್ಕಳಿಂದಲೇ ಮುಂದುವರಿಸುವಂತೆ ಮಾಡಿ ಕಥೆ ಹೆಣೆಯುವ ಜಾಣ್ಮೆಯನ್ನು ಮಕ್ಕಳಲ್ಲಿ ಮೂಡಿಸಿದರು.
- ಶ್ರೀ ನಟೇಶ್ ಅವರು ದೇಶೀಯ ಆಟವನ್ನು ಮಕ್ಕಳಿಗೆ ಆಡಿಸಿದರು.
- ಶ್ರೀಮತಿ ಕುಸುಮ ಅವರು ಮಕ್ಕಳಿಗೆ ವಿಧವಿಧವಾದ ಆಟಗಳನ್ನು ಆಡಿಸಿದರು.
- ಶ್ರೀಮತಿ ಸಿಂಧು ಪ್ರಿಯದರ್ಶಿನಿಯವರು ಈ ಬೇಸಿಗೆ ಶಿಬಿರಕ್ಕೆ ಬೇಕಾದ ಆರಂಭದ ಎಲ್ಲ ಕೆಲಸಗಳನ್ನೂ, ಕಂಪ್ಯೂಟರ್ ಸಂಬಂದಿತ ಎಲ್ಲ ಕಾರ್ಯಗಳನ್ನು ಕರಪತ್ರದ ವಿನ್ಯಾಸ ಮೊದಲ್ಗೊಂಡು ಪ್ರಮಾಣ ಪತ್ರವನ್ನು ಸಿದ್ಧಗೊಳಿಸುವುದರ ಜವಾಬ್ದಾರಿ, ಮಕ್ಕಳ ಹಾಜರಾತಿ ಇತ್ಯಾದಿ, ಶಿಬಿರಕ್ಕೆ ಬೇಕಾದ ಸಂಪೂರ್ಣ ತಾಂತ್ರಿಕ ಬೆಂಬಲ ನೀಡಿ ಶಿಬಿರದ ಯಶಸ್ಸಿನಲ್ಲಿ ಮಹತ್ತರ ಪಾತ್ರ ವಹಿಸಿದರು.
- ಶ್ರೀಯುತರಾದ, ಅನಂತ್. ಎಂ. ಎಸ್, ಅಜೇಯಕೃಷ್ಣ, ಹೆಚ್. ಸಿ. ಪ್ರಭಾಕರ್, ಬಾಲಪ್ರಭಾ ಕಾರಂತರು, ನರಸಿಂಹಯ್ಯ. ವಿ, ಶ್ರೀಮತಿ ಸಂಧ್ಯಾ ಶೇಖರ್, ಶ್ರೀಮತಿ ಗಾಯತ್ರಿ ಪ್ರಭಾಕರ್ ಹಾಗೂ ಎಲ್ಲಾ ಶಿಕ್ಷಕರು ಶಿಬಿರದ ಪ್ರತಿಯೊಂದು ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದರು.
- ಶ್ರೀಯುತ ನವೀನ್ ರವರು ಎರಡು ದಿನಗಳಲ್ಲಿ ಎರಡು ನೃತ್ಯಗಳನ್ನು ಸಂಯೋಜಿಸಿ, ಮಕ್ಕಳಿಗೆ ತರಬೇತಿ ಕೊಟ್ಟು ನೀಡಿದ ಪ್ರದರ್ಶನ ಎಲ್ಲರನ್ನೂ ಭಾವುಕರನ್ನಾಗಿಸಿತ್ತು.

ಈ ಶಿಬಿರ ಅತ್ಯಂತ ಯಶಸ್ವಿಯಾಗಿ ನೆರವೇರುವಲ್ಲಿ ಎಲ್ಲ ಚಟುವಟಿಕೆಗಳಲ್ಲಿ ಭಾಗವಹಿಸಿ, ಲವಲವಿಕೆಯಿಂದ ಕಲಿತು ಪ್ರದರ್ಶಿಸಿದ ಮಕ್ಕಳು, ಮಕ್ಕಳಿಗೆ ಪ್ರೋತ್ಸಾಹ ನೀಡಿದ ಪೋಷಕರುಗಳ ಪಾತ್ರ ಮಹತ್ತರವಾದದ್ದು.

ಶಿಬಿರದ ಸಮಾರೋಪ ಸಮಾರಂಭದಲ್ಲಿ ವಿನಾಯಕ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಸತ್ಯನಾರಾಯಣರವರು ಉಪಾಧ್ಯಕ್ಷರಾದ ಶ್ರೀ ರಮೇಶ್ ರವರು ಹಾಗೂ ಕಾರ್ಯದರ್ಶಿ ಗಳಾದ ಶ್ರೀ ಗುರುರಾಜ್ ರವರು ಮತ್ತು ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಅನಂತರಾಮು ರವರು, ಉಪಾಧ್ಯಕ್ಷರಾದ ಶ್ರೀಧರ್ ರಾವ್ ರವರು ಕಾರ್ಯದರ್ಶಿ ಗಳಾದ ರಮೇಶ್ ರವರು ಮಕ್ಕಳಿಗೆ ಶುಭಹಾರೈಸಿದರು. ಕೆಲವು ಮಕ್ಕಳು, ಪೋಷಕರು ಶಿಬಿರದ ಕುರಿತಾಗಿ ಶ್ಲಾಘನೀಯ ಮಾತನ್ನಾಡಿದರು. ಮಕ್ಕಳಿಗೆ ಉಪಾಹಾರ, ಬಹುಮಾನಗಳನ್ನು ಪ್ರಾಯೋಜಿಸಿದ ಎಲ್ಲರಿಗೂ ಅಶ್ವತ್ಥ ನಾರಾಯಣ್ ರಾವ್ ರವರು ಧನ್ಯವಾದಗಳನ್ನು ತಿಳಿಸಿದರು. ಮಕ್ಕಳು ಶಿಬಿರದಲ್ಲಿ ಕಲಿತಂತಹ ಶ್ಲೋಕ, ಗೀತೆ, ಯೋಗಾಸನ, ನೃತ್ಯ ವನ್ನು ಪ್ರದರ್ಶಿಸಿ ಪ್ರೇಕ್ಷಕರ ಮನ ಸೆಳೆದರು. ಉಪ ಕಾರ್ಯದರ್ಶಿಗಳಾದ ಶ್ರೀ ಎ. ಆರ್. ಎನ್. ಮೂರ್ತಿ ಅವರಿಂದ ವಂದನಾರ್ಪಣೆ ಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**ಮಕ್ಕಳ ಬೇಸಿಗೆ ಶಿಬಿರದ ಸಂಚಾಲಕರು:**

ಶ್ರೀಮತಿ ಎ. ಸಿಂಧು ಪ್ರಿಯದರ್ಶಿನಿ, ನಾಗಶ್ರೀ, ಬ್ರಾಹ್ಮಿ, ನಟೇಶ್.

Sankalp Nethralaya & Polyclinic
NABH CERTIFIED ISO 9001 : 2017
(A UNIT OF SUBHSANKALP NETHRALAYA & POLYCLINIC PVT. LTD.)
One Stop Solution For All Eye Related Problems & Surgeries
Centre Of Excellence For Laser Cataract Surgeries
Cashless Facility available for all Major TPA Insurance
SN1: 85/1 19th Main Road, Sector 1, HSR Layout, Bangalore - 560102 Tel: 080 22580466 | Mob: 9739724666
SN2: #87, Ground Floor, Ashraya Building, Central Jail Road, Naganathpura, Electronic City Post; Bangalore - 560100 Tel: 080 25735556 | Mob: 8147323555
Email: sankalpnethralaya@gmail.com
Timings : 10am to 8pm

ANAND DIAGNOSTIC LAB
A Neuberg Associate
In Association with SANKALP DIAGNOSTIC LAB
Now at HSR Layout
# 511, 15th C Main, 15th Cross, Sector 4, HSR Layout, Bangalore 560 102.
For all Blood Investigations, ECG & Ultra Sound
Ph : 080 4147 9460 / Mob : 89511 64466
Timings : 7am to 7pm

# ಕನ್ನಡದಲ್ಲಿ ಗಾಯತ್ರಿ ಮಂತ್ರದ ಸಂಪೂರ್ಣ ಅರ್ಥ

ಗಾಯತ್ರೀ ಮಂತ್ರ ಹಿಂದೂ ಧರ್ಮದ ಅತಿ ಶ್ರೇಷ್ಠ ಮಂತ್ರಗಳಲ್ಲೊಂದು. ಬ್ರಹ್ಮ ಪವಿತ್ರವಾದ ಸೂರ್ಯ ನಾರಾಯಣನಿಂದ ಉದ್ಭವಿಸಲ್ಪಟ್ಟ ಗಾಯತ್ರಿ ಮಂತ್ರ ಅತ್ಯಂತ ಪ್ರಭಾವಶಾಲಿಯಾದುದು. ಸೂರ್ಯ ದೇವರಿಗೆ ಸಂಬಂಧಿಸಿದ ಈ ಮಂತ್ರ ವಿಶ್ವಾಮಿತ್ರ ಋಷಿಗಳು ಮನುಕುಲಕ್ಕೆ ನೀಡಿದ ದಿವ್ಯಮಂತ್ರವಾಗಿದೆ.

**ಓಂ ಭೂರ್ಭುವಸ್ವಃ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ ಧಿಯೋ ಯೋನಃ ಪ್ರಚೋದಯಾತ್||**

ಬೆಳಕಿನ ಪ್ರತೀಕವಾದ ಸೂರ್ಯದೇವನಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಾ "ನಮ್ಮ ಬುದ್ಧಿ ಮತ್ತು ಕರ್ಮಗಳು ಸದಾ ಉತ್ತಮ ಮಾರ್ಗದಲ್ಲಿ ನೆಲೆಗೊಳ್ಳುವಂತೆ ಪ್ರಚೋದಿಸು' ಎಂದು ಪ್ರಾರ್ಥಿಸುವ ಮಹಾಮಂತ್ರವೇ ಗಾಯತ್ರಿಮಂತ್ರ.

ಒಟ್ಟು 2 4 ಅಕ್ಷರಗಳನ್ನು ಒಳಗೊಂಡಿರುವ ಗಾಯತ್ರೀ ಮಂತ್ರವನ್ನು ನಿತ್ಯ ಜಪಿಸುವುದರಿಂದ ದೇಹದ ಆರಿಸಿದ 2 4 ಗ್ರಂಥಿಗಳನ್ನು ಬಲಗೊಳಿಸುತ್ತದೆ.

ಪವಿತ್ರ ಗಾಯತ್ರಿ ಉಚ್ಚಾರದ ಮೊದಲಿಗೆ ಭೂಃ ಭುವಃ ಸ್ವಃ ಎಂಬ ವ್ಯಾಹೃತಿಗಳು ಚೈತನ್ಯರೂಪಿ ಆನಂದದ ಪ್ರತೀಕಗಳು. ಭೂಃ ಎಂದರೆ ಅಗ್ನಿ, ಭುವಃ ಎಂದರೆ ವಾಯು, ಸ್ವಃ ಎಂದರೆ ಆದಿತ್ಯ. ಈ ಮೂವರೂ ಕೂಡಿಕೊಂಡ ರೂಪ ಭಗವಾನ್ ಸೂರ್ಯನದು. ಸರ್ವಶಕ್ತಿರೂಪನ ಭಕ್ತಿಯುತ ಪೂಜೆಗೆ ಇದು ನಾಂದಿ.

ಯುಗಯುಗಗಳಿಂದಲೂ ಈ ಮಂತ್ರವನ್ನು ಅಗ್ನಿಸಮ್ಮುಖದಲ್ಲೇ ಸ್ವೀಕರಿಸುತ್ತ ಬಂದ ವಾಡಿಕೆ ನಮ್ಮದು. ಅಗ್ನಿಸಮ್ಮುಖದಲ್ಲೇ ಸ್ವೀಕರಿಸಲಾಗುವ ಏಕ ಮಾತ್ರ ಮಂತ್ರ ಇದು. ಇದರಲ್ಲಿ ಗಾಯತ್ರಿ ಪ್ರತಿಪಾದ್ಯವಾದ 24 ಭಗವಂತನ ರೂಪಗಳಿವೆ.ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂದನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷೀಕೇಶ, ಪದ್ಮನಾಭ, ದಾಮೋದರ, ಸಂಕರ್ಷಣ, ವಾಸುದೇವ, ಪ್ರದ್ಯುಮ್ನ, ಅನಿರುದ್ಧ, ಪುರುಷೋತ್ತಮ, ಅಧೋಕ್ಷಜ, ನರಸಿಂಹ, ಅಚ್ಯುತ, ಜನಾರ್ದನ, ಉಪೇಂದ್ರ, ಹರಿ, ಕೃಷ್ಣ....

ಅಷ್ಟೇ ಅಲ್ಲ ಗಾಯತ್ರಿಯಲ್ಲಿ ಹತ್ತು ಶಬ್ದಗಳಿವೆ ಅವು ವಿಷ್ಣುವಿನ 10 ಸ್ವರೂಪಗಳು...ವಿಷ್ಣುವಿನ ಹತ್ತು ಅವತಾರಗಳನ್ನು ಸೂಚಿಸುತ್ತದೆ.

**ತತ್** – ಅಂದರೆ ಮತ್ಸ್ಯಾವತಾರ "ತತ್" ಭಗವಂತನ ಮತ್ಸ್ಯಾವತಾರವನ್ನು ಹೇಳುವ ಶಬ್ದ. ತತ ಅಂದರೆ ವಿಸ್ತಾರಗೊಳ್ಳುವುದು. ಹೀಗೆ ಮಾನವನಾದ ವೈವಸ್ವತ ಮನುವನ್ನು ಒಂದು ಭಾರಿ ಪ್ರಳಯದಿಂದ ಕಾಪಾಡಿದ ರೂಪವೇ ಮತ್ಸ್ಯಾವತಾರ.

**ಸವಿತುಃ** – ಅಂದರೆ ಕೂರ್ಮಾವತಾರ ಆಮೆಯ ರೂಪದಲ್ಲಿ ಅವತರಿಸಿ ದೇವತೆಗಳು ತಾವು ಕಳೆದುಕೊಂಡ ಅಮರತ್ವ ಹಾಗೂ ದೈವಿಕ ಶಕ್ತಿ, ಪ್ರಭಾವಗಳನ್ನು ಮರು ಸಿಗುವಂತೆ ಮಾಡಿಕೊಟ್ಟ ರೂಪ "ಕೂರ್ಮಾವತಾರ"....

**ವರೇಣ್ಯಂ** – ಅಂದರೆ ವರಾಹಾವತಾರ ವರೇಣ್ಯ, ವರಾಹ ಎರಡೂ ಪರ್ಯಾಯ ಶಬ್ದಗಳು.. "ಕಪಿರ್ವರಾಹ ಶ್ರೇಷ್ಠಶ್ಚ" ವರಾಹ ಅಂದರೆ ಶ್ರೇಷ್ಠವಾದದ್ದು. ದೈತ್ಯ ಹಿರಣ್ಯಾಕ್ಷನು ಭೂಮಿಯನ್ನು ಕದ್ದು ಆಕೆಯನ್ನು ಆದಿಸ್ವರೂಪದ ನೀರಿನಲ್ಲಿ ಬಚ್ಚಿಟ್ಟಾಗ, ವಿಷ್ಣು ಆಕೆಯನ್ನು ಕಾಪಾಡಲು ವರಾಹನಾಗಿ ಕಾಣಿಸಿಕೊಂಡು ರಾಕ್ಷಸ ಹಿರಣ್ಯಾಕ್ಷನನ್ನ ಸಂಹಾರ ಮಾಡುತ್ತಾನೆ...

**ಭರ್ಗಃ** – ಅಂದರೆ ನರಸಿಂಹಾವತಾರ, ಶತ್ರುಗಳನ್ನು ನಾಶಮಾಡಿದ ಉಗ್ರರೂಪ... ಭಕ್ತ ಪ್ರಹ್ಲಾದನ ರಕ್ಷಣೆ ಮತ್ತು ಹಿರಣ್ಯಕಶ್ಯಪುವಿನ ನಾಶಕ್ಕಾಗಿ ಶ್ರೀ ವಿಷ್ಣು ನರಸಿಂಹ ಅವತಾರ ತಾಳುತ್ತಾನೆ. ದುಷ್ಟರನ್ನು, ದೋಷಗಳನ್ನು, ಅಜ್ಞಾನವನ್ನು ನಾಶಮಾಡಿ ಅದರ ಮೂಲಕ "ಭ" ರತಿ ಜ್ಞಾನರೂಪ ಇದಾಗಿದೆ...

**ದೇವಸ್ಯ** – ಅಂದರೆ ವಾಮನಾವತಾರಬಲಿಯ ಸಂಹಾರಕ್ಕಾಗಿ ವಿಷ್ಣು ಎತ್ತಿದ ಅವತಾರ ವಾಮನಾವತಾರ. ಬಲಿಯ ಜೊತೆಗೆ ಮೂರು ಹೆಜ್ಜೆಗಳ ವ್ಯವಹಾರ ಮಾಡಿದ ರೂಪ ಇದಾಗಿದೆ....

**ಧೀಮಹಿ** – ಅಂದರೆ ಪರಷುರಾಮಾವತಾರ 'ಮಹಿ' ಅಂದರೆ ಭೂಮಿ. ದಿನು ಅಂದರೆ ಪುಷ್ಟೌ. ಭೂಮಿಯ ಮೇಲೆ ಇಪ್ಪತ್ತೊಂದು ಬಾರಿ ದುಷ್ಟ ಕ್ಷತ್ರಿಯರ ಸಂಹಾರ ಮಾಡಿ ಭೂಮಿಗೆ ಸಂತೋಷವನ್ನು ಕೊಟ್ಟ ರೂಪವೇ "ಪರುಷರಾಮಾವತಾರ"...

**ಧಿಯಃ** – ಅಂದರೆ ರಾಮಾವತಾರ


**"ಯಂ"** ಅಂದರೆ ಜ್ಞಾನ ಸ್ವರೂಪರಾದಂತ ವಾಯುದೇವ ಅವನಿಗೆ "ದಿನೋತಿ" ಆನಂದವನ್ನು ಕೊಟ್ಟ ರೂಪ "ಧಿಯಃ" ಅಂದರೆ ರಾಮರೂಪ. ದುಷ್ಟ ಶಿಕ್ಷಕ ಶಿಷ್ಟ ರಕ್ಷಕನಾಗಿ ಅಯೋಧ್ಯೆಯ ಸೂರ್ಯವಂಶದ ದಶರಥ ನಂದನ ರಾಮ, ಆತನ ಮಡದಿ ಸೀತೆ ಹಾಗೂ ಸೀತೆಯ ಅಪಹರಣ ಮಾಡಿದ ರಾವಣನ ಸಂಹಾರ ಮಾಡುತ್ತಾನೆ...

**ಯಃ** – ಅಂದರೆ ಕೃಷ್ಣಾವತಾರ "ಯ"ಕಾರ ವಾಚ್ಯನಾಗಿ , ಯಃ-ಜ್ಞಾನಾವತಾರ. ಒಟ್ಟು ನಾಲ್ಕು ಯೋಗಮಾರ್ಗಗಳಾದ ಭಕ್ತಿ, ಕರ್ಮ, ಧ್ಯಾನ ಮತ್ತು ಜ್ಞಾನ ಮಾರ್ಗಗಳನ್ನು ನೀಡಿ ಹಿಂದೂ ಚಿಂತನೆ ಮತ್ತು ವೈದಿಕ, ಅಧ್ಯಾತ್ಮಿಕ, ಯೋಗಿಕ ಹಾಗೂ ತಾಂತ್ರಿಕ ತತ್ವಶಾಸ್ತ್ರಗಳನ್ನು ಸಮಾಗಮವಾದ ಭಗವದ್ಗೀತೆಯ ಮೂಲಕ ಸಮಸ್ತ ವೇದಸಾರವನ್ನು ಆವಿಷ್ಕಾರ ಮಾಡಿದವ ಕೃಷ್ಣ. ಅದುವೇ "ಕೃಷ್ಣಾವತಾರ".

**ನಃ** – ಅಂದರೆ ಬುದ್ಧಾವತಾರ, ನಃ ಅಂದರೆ ಬುದ್ಧ. ಚತುರಾರ್ಯ ಸತ್ಯಗಳಾದ ದುಃಖ, ದುಃಖದ ಹುಟ್ಟು, ದುಃಖದ ಅಡಗುವಿಕೆ, ಮತ್ತು ದುಃಖ ನಿವಾರಣೆಗೆ ಒಯ್ಯುವ ಅಷ್ಟಾಂಗಿಕ ಮಾರ್ಗವನ್ನು ಕಂಡು ಹಿಡಿದವ. ಕಲಿಯುಗದಲ್ಲಿ ಬುದ್ಧ ಅವತಾರದಲಿ ಶ್ರೀಮಾನ್ ಮಹಾವಿಷ್ಣುವು ಮನುಷ್ಯನಾಗಿ ಅವತರಿಸುತ್ತಾನೆ...

**ಪ್ರಚೋದಯಾತ್** – ಅಂದರೆ ಕಲ್ಕ್ಯಾವತಾರ

ಲೋಕದಲ್ಲಿ ಅಧರ್ಮ ಹೆಚ್ಚಿದಾಗ ಧರ್ಮಸಂಸ್ಥಾಪನೆಗೆ ಪರಮಾತ್ಮ ಕಾಲಕಾಲಕ್ಕೆ ಯಾವುದೋ ಒಂದು ರೂಪದಲ್ಲಿ ಭೂಮಿಗೆ ಇಳಿದು ಬಂದು ಹೇಗೆ ಕಾಪಾಡುತ್ತಾನೆ ಅನ್ನುವುದರ ಬಗ್ಗೆ ಸ್ಪಷ್ಟವಾಗಿ ಗಾಯತ್ರಿಯ ಮಂತ್ರದಲ್ಲಿ ಧರ್ಮ ಸಂಸ್ಥಾಪನಾದ ವಿಷ್ಣುವಿನ ಹತ್ತು ಅವತಾರಗಳ ಬಗ್ಗೆ ಮಂತ್ರದಲ್ಲಿ ಉಲ್ಲೇಖವಿದೆ.



Pure Since 1925
Divinity crafted in gold.
BHIMA
FORMERLY
BHIMA
Also available at
bhimagold.com
BHIMA Helpline
1800-121-9076
BENGALURU: Dickenson Road • Jayanagar 3rd Block • Koramangala • HBR Layout
Rajajinagar • Marathahalli • Hoodi • Malleshwaram • Jayanagar 4th Block • Commercial Street
UDUPI • HASSAN • MANGALURU • SHIVAMOGGA • VIJAYAWADA • CHENNAI
RAJAHMUNDRY • HOSUR • BELAGAVI • HUBBALLI

# ಪ್ರದೋಷ ಪೂಜಾ ಪುಸ್ತಕ ಬಿಡುಗಡೆ ಸಮಾರಂಭ





# ಬೇಸಿಗೆ ಶಿಬಿರ






SME S.M.ENTERPRISES

WE MANUFACTURE & REPAIR ENERGY EFFICIENT STAR RATED TRANSFORMERS

DISTRIBUTION TRANSFORMERS

- Range : 15KVA - 1000KVA
- Services : Manufacturing, repair & reconditioning
- Type : Dry type & conventional type

ADDRESS

C-28 KSSIDC, Industrial Estate, 1st Stage, Mandya - 571402.
Branches : Mathikere (Bengaluru), Gubbi, Chitradurga
Mobile: +91 9845203607
Email: sme_mathikere@yahoo.com



## ಶಾಲಾ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ವಿತರಣೆ






## ಶಂಕರ ಮತ್ತು ರಾಮಾನುಜ ಜಯಂತಿ





## ಸಂಘದ ಗಾಯತ್ರೀ ಭವನದಲ್ಲಿ ಜರುಗುತ್ತಿರುವ ಕಾರ್ಯಕ್ರಮಗಳು.

1. ಪ್ರತೀ ಶನಿವಾರ ಮತ್ತು ಭಾನುವಾರದಂದು ಬೆಳಿಗ್ಗೆ 6.15 ರಿಂದ 8.00 ಗಂಟೆಯವರೆಗೆ ಎರಡು ಗುಂಪುಗಳಲ್ಲಿ ವೇದ ತರಗತಿ.
2. ಪ್ರತೀ ಮಂಗಳವಾರ ದಿಂದ ಶುಕ್ರವಾರದವರೆಗೆ(4 ದಿನಗಳು) ಸಂಜೆ 5 ರಿಂದ 6 ರ ವರೆಗೆ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯ ವತಿಯಿಂದ ಯೋಗ ತರಗತಿಗಳು.
3. ಪ್ರತೀ ತ್ರಯೋದಶಿಯ ಪ್ರದೋಷ ಕಾಲದಲ್ಲಿ, ಪ್ರದೋಷ ಪೂಜೆ.
4. ಸಂಘದಲ್ಲಿ ಜರುಗುವ ಎಲ್ಲಾ ಕಾರ್ಯ ಕ್ರಮಗಳನ್ನೂ ಸಂಘದ ವೆಬ್ ಸೈಟ್ ಹಾಗೂ ಯೂ ಟ್ಯೂಬ್ ಚಾನಲ್ ನಲ್ಲಿ ಪ್ರಸರಣ ಮಾಡಲಾಗುತ್ತಿದೆ.
5. ಗಾಯತ್ರೀ ಭವನವನ್ನು ಸಂಘದ ಸದಸ್ಯರ ಕಾರ್ಯಕ್ರಮಗಳಿಗಾಗಿ, ದಿನಕ್ಕೆ ರೂ.4500/- ನ್ನು ಪಾವತಿಸಿ ಪಡೆಯಬಹುದಾಗಿರುತ್ತದೆ


**BENGALURU:** Sarjapura Road, **HSR LAYOUT**

KARNATAKA | TELANGANA | ANDHRA PRADESH | TAMIL NADU | PUDUCHERRY |

# 'ಶತಾಯುಃ ವೈ ಪುರುಷಃ' - ನೂರು ವರುಷ ಬಾಳಿರಿ

ಈಶೋಪನಿಷತ್ತಿನ ಎರಡನೇ ಮಂತ್ರದಲ್ಲಿ ಈ ಜಗತ್ತು ಆಧ್ಯಾತ್ಮಕವಾದದ್ದು ಅದರಲ್ಲಿ, ನಾವು ಹೇಗೆ ಬದುಕಬೇಕು ಎಂಬ ಮಾರ್ಗದರ್ಶನ ನೀಡುತ್ತದೆ.

'ಕುರ್ವನ್ನೆವೇಹ ಕರ್ಮಾಣಿ ಜಿಜೀವಿಶೇತ್ ಶತಮ್ ಸಮಾಃ,
ಏವಂ ತ್ವಯೀನಾನ್ಯಥೇತೋಽಸ್ಥಿ ನ ಕರ್ಮಲಿಪ್ಯತೇ ನರೇ'

ಈ ಜಗತ್ತಿನಲ್ಲಿ ಕರ್ಮ ಮಾಡುತ್ತಲೇ ನೂರು ವರ್ಷ ಕಾಲ ಬದುಕುವ ಅಪೇಕ್ಷೆಯನ್ನು ಹೊಂದಿರಬೇಕು. ಮಾನವ ಜೀವಿಯು ದೈಹಿಕವಾಗಿಯೂ ಮಾನಸಿಕವಾಗಿಯೂ ಆರೋಗ್ಯಕರ ಜೀವನವನ್ನು ನಡೆಸಿದ್ದೆ ಆದರೆ ನೂರು ವರ್ಷ ಬದುಕುತ್ತಾನೆ ಎಂದೇ ' ಶತಾಯುಃ ವೈ ಪುರುಷಃ' ಎಂದು ವೇದಗಳಲ್ಲಿ ಹೇಳಲಾಗಿದೆ. ಆದರೆ ಈ ಬದುಕು ಎಲ್ಲ ವಿಧಗಳಲ್ಲಿಯೂ ಶ್ರೀಮಂತವಾಗಿರಬೇಕು. ಸರ್ವಗುಣ ಸಂಪನ್ನನೂ, ಜ್ಞಾನಿಯೂ ಮತ್ತು ಆನಂದಮಯಿಯೂ ಆಗಿರಬೇಕು. ನಿಯಮಬದ್ಧವಾದ ಬದುಕು, ಚಟುವಟಿಕೆಯಿಂದ ಕೂಡಿದ ಬದುಕು ಮಾನವನಿಗೆ ೧೦೦ ವಸಂತಗಳನ್ನು ತೋರಿಸಬಹುದು.

ಬದುಕಿಗೆ ಈ ಆನಂದ ಉತ್ಸಾಹಗಳನ್ನು ಕೊಡಲು ಸಾಧ್ಯವಾಗುವುದು ಆತ್ಮ ಜ್ಞಾನದ ಮೂಲಕವೇ. ನಮ್ಮ ದೈನಂದಿನ ಕಾರ್ಯ, ಕರ್ಮಗಳನ್ನು ಭಾಗವತ್ಕಾರ್ಯವೆಂದು ನಿಶ್ಚಿತ ಭಾವದ ಮೂಲಕ ನಿರ್ವಹಿಸಿದ್ದೇ ಆದರೆ, ಆನಂದ ಉತ್ಸಾಹಗಳ ಆ ಸಾರ್ಥಕ ಬದುಕು ಮಾನವನನ್ನು ಶತಾಯುಷಿಯನ್ನಾಗಿಸಬಹುದು. ಸೋಮಾರಿತನ ಮತ್ತು ಬದುಕಿನ ಬಗ್ಗೆ ತಾತ್ಸಾರ ಮನೋಭಾವವನ್ನು ಗೆದ್ದು ನಾವು ಕರ್ತವ್ಯವನ್ನು ನಿಭಾಯಿಸಿದಲ್ಲಿ, ಎಲ್ಲ ಕರ್ಮಗಳನ್ನು ದಿವ್ಯತೆಯ ಬೆಳಕಿನಲ್ಲಿ ಚೇತೋಹಾರಿಯಾಗಿ ಮಾಡಿದ್ದೆ ಆದಲ್ಲಿ ಮರ್ತ್ಯನಾದ ಮಾನವ ಈ ಬದುಕಿನಲ್ಲಿಯೇ ಅಮರತ್ವವನ್ನು ಪಡೆಯಬಹುದು ಎಂದು ಸಂತರು ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.

ಈ ವಿಚಾರವಾಗಿ, ರಾಮ ಕೃಷ್ಣ ಪರಮಹಂಸರು, ಯಾವುದು ಉತ್ಸಾಹ ಆನಂದದ ಬದುಕನ್ನು ನೀಡುತ್ತದೆಯೋ, ಅದರ ಮೂಲವನ್ನು ಅರಿಯುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಏಕೆಂದರೆ, ಬದುಕಿನ ಮೇಲ್ಪದರದಲ್ಲಿ ಮಹತ್ತರ ಸತ್ಯಗಳಿರುವುದಿಲ್ಲ ಅದಿರುವುದು ಆಳದಲ್ಲಿ. ಅವರು ಒಂದು ಉಪಮೆಯನ್ನು ನೀಡುತ್ತಾ, ಸಮುದ್ರದ ಮೇಲ್ಭಾಗದಲ್ಲಿ ಕಪ್ಪೆಚಿಪ್ಪುಗಳು ಸಿಗುತ್ತವೆ. ಆದರೆ, ಮುತ್ತುಗಳಿರುವುದು ಸಮುದ್ರದ ಆಳದಲ್ಲಿ. ಆದುದರಿಂದ ಬದುಕಿನ ದಿವ್ಯತೆಯ ಮೂಲವನ್ನು ಅರಿಯಲು ವಿಮರ್ಶೆ, ವಿಚಾರಣೆ ಅಗತ್ಯ. ಉಪನಿಷತ್ತುಗಳು ಇಂಥ ಮುತ್ತುಗಳ ಭಂಡಾರ.

ಹೀಗೆ ಹುಡುಕುತ್ತಾ ಹೋದಾಗ ಬದುಕಿಗೊಂದು ಗುರಿಯೂ ಲಭಿಸುತ್ತದೆ ಮತ್ತು ಅದು ಅರ್ಥಪೂರ್ಣವೂ ಆಗುತ್ತದೆ. ಬದುಕಿನ ದೀರ್ಘತೆ ಹೆಚ್ಚಿದಾಗ ಆಧ್ಯಾತ್ಮಕ ಆಳಕ್ಕೆ ಇಳಿದು ಹವಳ ಮುತ್ತುಗಳನ್ನು ಆರಿಸುವುದಕ್ಕೆ ಹೆಚ್ಚಿನ ಅವಕಾಶ ಲಭ್ಯವಾಗುತ್ತದೆ.

ಸ್ವಾಮೀ ವಿವೇಕಾನಂದರು ಭಾರತೀಯರು ವೀರಲಕ್ಷಣಗಳನ್ನು ಕಳೆದುಕೊಂಡು, ಸುಖಾಭಿಲಾಷಿಗಳಾದ್ದರಿಂದಲೇ, ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡರು ಎಂದು ವಿಮರ್ಶಿಸಲಾರಂಭಿಸಿದಾಗ ಜನತೆಗೆ ವೇದಾಂತದ ಶಕ್ತಿ ಮತ್ತು ನಿರ್ಭಯತೆಯ ಸಂದೇಶವನ್ನು ಸಾರಲಾರಂಭಿಸಿದರು. ಉಪನಿಷತ್ತುಗಳನ್ನು ಅರಿಯುವ ಮುನ್ನ ಸೇವೆ ಮತ್ತು ಚಾರಿತ್ರಿಕ ಶಕ್ತಿಯನ್ನು ಬೆಳೆಸಿಕೊಳ್ಳಲು ಕರೆ ನೀಡಿದರು. ಯುವಕರನ್ನು ಶಕ್ತಿವಂತರಾಗಿ ಎಂದು ಹುರಿದುಂಬಿಸಿದರು. ನಿಯಮಬದ್ಧವಾದ, ಚಟುವಟಿಕೆಯಿಂದ ಕೂಡಿದ ಬದುಕನ್ನು ಬಾಳಿರಿ ಎಂದು ಉಪದೇಶಿಸಿದರು. ಉಪನಿಷತ್ತುಗಳ ದೃಷ್ಟಿಯ ಲಕ್ಷಣ ಆನಂದ ಉಲ್ಲಾಸ ಎಂದು ಶ್ರುತಪಡಿಸಿದರು. ಬದುಕು ಶ್ರೀಮಂತವಾಗಿರಬೇಕು, ಸತ್ವಯುತವಾಗಿರಬೇಕು, ಜ್ಞಾನಪ್ರದವಾಗಿರಬೇಕು ಆಗ ಆಧ್ಯಾತ್ಮಕ ಮುತ್ತು ರತ್ನ ಹವಳಗಳನ್ನು ಬದುಕಿನ ಆಳದಿಂದ ಪಡೆಯಬಹುದು ಎಂಬ ಸತ್ಯವನ್ನು ಸಾರಿದರು.

(ಆಧಾರ: ಉಪನಿಷತ್ತುಗಳ ಸಂದೇಶ - ಸ್ವಾಮಿ ರಂಗನಾಥಾನಂದ)

# ಶ್ರೀ ಶಂಕರ ರೆಡ್ಡಿರವರ ಸ್ಮರಣೆ



ನಮ್ಮ ಸಂಘಕ್ಕೆ ನಮ್ಮದೇ ಆದ ಜಾಗ ಇಲ್ಲದಿದ್ದ ಸಂದರ್ಭದಲ್ಲಿ ನಮ್ಮ ಆಸರೆಯಾಗಿ ನಿಂತ ಮಹಾನುಭಾವರು ಸನ್ಮಾನ್ಯ ಶ್ರೀ. ಎಂ. ಶಂಕರ ರೆಡ್ಡಿಯವರು, ಸಂಘದ ಈಗಿನ ಕಾರ್ಯಾಲಯವಾಗಿರುವ ಗಾಯತ್ರೀ ಭವನವನ್ನು ಕಟ್ಟಿಸಿ 15 ವರ್ಷಗಳ ಕಾಲ ಲೀಜ್ ನಲ್ಲಿ ಉಚಿತವಾಗಿ ನೀಡಿದ್ದಾರೆ. ಶ್ರೀಯುತರು ಅನಾರೋಗ್ಯದಿಂದ ಬಳಲುತ್ತಿದ್ದು, ದಿನಾಂಕ 16/06/2025ರ ಸೋಮವಾರದಂದು ರಾತ್ರಿ 8.30ಕ್ಕೆ ಕೊನೆಯುಸಿರೆಳೆದರು. ಇವರಿಗೆ 75 ವರ್ಷ ವಯಸ್ಸಾಗಿತ್ತು. ಇವರ ನಿಧನವು ನಮಗೆ ತುಂಬಲಾರದ ನಷ್ಟವಾಗಿದೆ.

ಶ್ರೀಯುತ ಶಂಕರ ರೆಡ್ಡಿಯವರು ಉತ್ತಮ ಬಾಂಧವ್ಯ, ಸೌಜನ್ಯತೆಗೆ ಹೆಸರಾಗಿದ್ದು, ಸ್ನೇಹ ಜೀವಿ, ಸಮಾಜ ಸೇವಕರು, ದೈವ ಭಕ್ತರು ಹಾಗೂ ಧರ್ಮಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವರೂ ಆಗಿದ್ದರು. ದಾನಿಗಳಾದ ಇವರು ಸರ್ಜಾಪುರ ರಸ್ತೆಯಲ್ಲಿ "ತಾಯಿ ಮನೆ" ಅನಾಥಾಶ್ರಮವನ್ನು ನಡೆಸುತ್ತಿದ್ದು, ಇಲ್ಲಿ ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ನಡೆಸುತ್ತಿರುವ ಸುಮಾರು 140 ಮಕ್ಕಳಿದ್ದಾರೆ. ಇವರಿಗೆ ಉಚಿತ ಶಿಕ್ಷಣ, ಊಟ, ತಿಂಡಿ, ವಸತಿಯನ್ನು ಇಲ್ಲಿ ಕಲ್ಪಿಸಲಾಗುತ್ತಿದೆ. ಸಮಾಜಕ್ಕೆ ಆಸರೆಯಾಗಿದ್ದ ವ್ಯಕ್ತಿ ಶ್ರೀ. ಎಂ.ಶಂಕರ ರೆಡ್ಡಿಯವರ ನಿಧನವು ನಮಗೆ ಅತೀವ ದುಃಖವನ್ನು ತಂದಿದೆ. ಶ್ರೀಯುತರ ಆತ್ಮಕ್ಕೆ ನಾವೆಲ್ಲರೂ ಶಾಂತಿ ಹಾಗೂ ಸದ್ಗತಿ ಆಶಿಸೋಣ.



# Radiant Systems

RADIANT SYSTEMS

YASKAWA

**QUALITY PRODUCTS, TIMELY SERVICE**

RADIANT SYSTEMS, Authorized Business Partner of YASKAWA India Pvt Ltd for Karnataka region. We deal mainly with products related to Automation and Process Industries.

1) AC Drives, Servo Motor/Drives & Robotics.
2) Panel Engineering Solutions.
3) YASKAWA Solar Pump Controller with Built In MPPT.
4) Retrofit of Existing panels & PCC/MCC Panels.




**#695, 15th Cross, JP Nagar, 2nd Phase, Bangalore-560078**

**Mobile: +91 7760277175 Email: radiantspl@gmail.com**



# QUALITY INDUSTRIES

Specializing in the manufacturing of DPC aluminum wires and strips, our state-of-the-art facilities ensure precision and adherence to the highest industry standards. Beyond manufacturing excellence, we excel in the repair and reconditioning of distribution transformers, ranging from 15 KVA to 1000 KVA capacities

# D60/69 KSSIDC Industrial Estate Veerasandra Bengaluru - 560100


+91-9845203607

support@qualityindustries.co.in

www.artikelinox.com

# ARTIKEL® INOX

makes everything better







- STATIC PREPARATION LINE
- COFFEE & BAR LINE
- COOKING EQUIPMENTS
- EXHAUST SYSTEMS
- FISH MARKET LINE
- PASTRY & BAKERY LINE
- PIZZA LINE
- SELF SERVICE LINE
- TROLLEYS
- REFRIGERATION LINE
- IMPORTED EQUIPMENTS






+91 98448 86158
+91 89712 98150
+91-80-2976 6556
info@artikelinox.com

# SPL-26, 2nd Stage,Jigani Industrial Estate,
Anekal Taluk,Jigani, Bengaluru-560105 , India

# MAGNA®

**Centres for Obesity Diabetes and Endocrinology**





## Contact : 9945953953 / 9739412608

Sai Manasa Building, #703, 1st Floor, 30th Main, BTM 2nd Stage Next to Kuvempu Nagar Bus Depot, Bengaluru - 560076.


Scan the QR Code to visit Our Website